ಈ ವೈಚಾರಿಕ ನೆಲೆಯಲ್ಲಿ ಭಾಷಣ ಮಾಡಲು ಹೊರಟರೆ ಕನ್ನಡಕ್ಕೆ ಹೋರಾಡುವ ಕಂದರು ನವೆಂಬರ್‌ನಲ್ಲಿ ನಿರುದ್ಯೋಗಿಗಳಾಗಬಹುದು. ದೇಶ, ಭಾಷೆ, ಧರ್ಮ, ಜಾತಿಗಳನ್ನು ಆವೇಶದ ನೆಲೆಯಲ್ಲಿಟ್ಟು ಸಾರ್ವಜನಿಕ ಸಮಾರಂಭಗಳಲ್ಲಿ ಓತಪ್ರೋತವಾಗಿ ಕುಟ್ಟಿದರೆ ಕನಿಷ್ಠ ರಾಜ್ಯೋತ್ಸವ ಪ್ರಶಸ್ತಿ ಗಟ್ಟಿ. ಆದರೆ ಒಂದು ಭಾಷೆಯ ವಿರುದ್ಧ ಮತ್ತೊಂದನ್ನು ಎತ್ತಿಕಟ್ಟುವ, ಬಹುಸಂಖ್ಯಾತರಿಗಾಗಿ ಅಲ್ಪಸಂಖ್ಯಾತರನ್ನು ತುಚ್ಛೀಕರಿಸುವ, ಜಾತಿಯ ಹೆಸರಿನಲ್ಲಿ ಅಸ್ಪೃಶ್ಯತೆ ಆಚರಿಸುವ ಹುನ್ನಾರಗಳಿಂದ ಪಾರಾಗದೆ ನಮ್ಮ ದೇಶಕ್ಕೆ ಒಳ್ಳೆಯ ಭವಿಷ್ಯವಿಲ್ಲ.

'ಸಾಸಿವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ' ಎನ್ನುವ ಮಾತು ಭಾಷಣಕಾರರಿಗೆ ಚೆನ್ನಾಗಿ ಅನುಭವಕ್ಕೆ ಬಂದಿರುತ್ತದೆ. ಮುವತ್ತು ನಿಮಿಷದ ಭಾಷಣಕ್ಕೆ ಹತ್ತು ದಿನ ಮೈ ಪರಚಿಕೊಳ್ಳಬೇಕು. ಇನ್ನೂ ಭಾಷಣ ಮಾಡಬೇಕಾದ ಸ್ಥಳ ಎಷ್ಟೇ ದೂರವಿರಲಿ, 'ಅದುವೆ ಕಾಶಿ'ಯೆಂಬ ಪವಿತ್ರ ಭಾವನೆಯಿಂದ ಪಾದ ಬೆಳೆಸಬೇಕು. ಈಗ್ಗೆ ನಾಲ್ಕು ವರ್ಷಗಳಿಂದೆ ಬೆಳ್ತಂಗಡಿಯಲ್ಲಿ ಅಂಬೇಡ್ಕರ್ ಚಿಂತನೆಗಳ ಮೇಲಿನ ಭಾಷಣಕ್ಕೆ ಕರೆ ಬಂತು. ಒಲ್ಲೆ ಎಂದೆ. ಆಪ್ತರಿಂದ ಶಿಫಾರಸುಗಳನ್ನು ಮಾಡಿಸಿ, ನಿರಂತರ ಒತ್ತಾಯ

